**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ20-06-2026**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಕೆ ವಕೀಲರಿಂದ**

ರಾಜೇಂದ್ರ ರವರ ಆಸ್ತಿ ಹೆಬ್ಬನಹಳ್ಳಿಯಲ್ಲಿ ಇರುತ್ತದೆ. ದಾವ ಆಸ್ತಿಯ ಪಕ್ಕದಲ್ಲಿ ರಾಜೇಂದ್ರ ರವರ ಆಸ್ತಿ ಇರುತ್ತದೆ. ಶಿಡಿಗಳಲೆ ಗ್ರಾಮದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಬಿಟ್ಟು ಬೇರೆಯವರು ವಾಸವಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಅವಿದ್ಯಾವಂತರಾಗಿರುತ್ತಾರೆ. ನಿ ಪಿ 10 ರಂತೆ 1 ನೇ ಪ್ರತಿವಾದಿಗೆ 1997-98 ರಲ್ಲಿ ಖಾತೆ ಬದಲಾಣೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. ನಿ ಪಿ 46 ನೋಟೀಸ್ ಗೆ ನಾನು ಮತ್ತು ರಾಜೇಂದ್ರ ಪ್ರಸಾದ್ ಇಬ್ಬರು ಸೇರಿ ಮಾಹಿತಿಯನ್ನು ನೀಡಿರುತ್ತೇವೆ. 3 ನೇ ಪ್ರತಿವಾದಿಗೆ ಸದರಿ ನೋಟೀಸ ಜಾರಿಯಾಗಿಲ್ಲ ಎಂದರೆ ಸರಿ. ಆನಂತರ ನಾವು ಪತ್ರಿಕಾ ಪ್ರಕಟಣೆ ಸಹ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನಿ ಪಿ 45 ರ ಮೇಲೆ ಯಾವುದೇ ಪತ್ರಿಕಾ ಪ್ರಕಟಣೆ ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ ಪಿ 51 ನ್ನು ಸಕಲೇಶಪುರದಲ್ಲಿ ದಸ್ತುರರು ಟೈಪ್ ಮಾಡಿರುತ್ತಾರೆ. ಕರಾರು ಪತ್ರ ಆದ ದಿನವೇ ನಿ ಪಿ 51 ನ್ನು ಮಾಡಿರುತ್ತಾರೆ. ಆದರೆ ದಿನಾಂಕ ನೆನಪಿಲ್ಲ. ನಿ ಪಿ 51 ದಾಖಲಾತಿ ದಾವ ಆಸ್ತಿ ಸ್ವಾಧೀನಕ್ಕೆ ಕುರಿತು ಆಗಿರುತ್ತದೆ.

ನಿ ಪಿ 4 ರಲ್ಲಿ ದಾವ ಆಸ್ತಿ ಸ್ವಾಧೀನ ನೀಡುವ ಬಗ್ಗೆ ನಮೂದಿಸಿರುತ್ತಾರೋ ಇಲ್ಲವೋ ನೆನಪಿಲ್ಲ. ಮೊದಲು ನಿ ಪಿ 4 ದಾಖಲಾತಿಗೆ ಸಹಿ ಮಾಡಿರುತ್ತೇನೋ ಅಥವಾ ನಿ ಪಿ 51 ಕ್ಕೆ ಸಹಿ ಮಾಡಿರುತ್ತೇನೋ ಎಂದು ನನಗೆ ಈಗ ನೆನಪಿಲ್ಲ. ನಿ ಪಿ 51 ರಲ್ಲಿ ದಸ್ತುರರ ಸಹಿ ಇರುವುದಿಲ್ಲ ಎಂದರೆ ಸರಿ. ನಿ ಪಿ 51 ದಾಖಲಾತಿ ಪ್ರತಿವಾದಿಯವರಿಗೆ ತಿಳಿಯದ ಹಾಗೇ ಖಾಲಿ ಹಾಳೆಯ ಮೇಲೆ ಅವರ ಸಹಿ ಪಡೆದು ಆನಂತರ ಸೃಷ್ಠಿ ಮಾಡಿರುತ್ತೇವೆಂದರೆ ಸರಿಯಲ್ಲ. ನಿ ಪಿ 51 ರ 2 ಪುಟದ ಕೊನೆಯ 3 ನೇ ಸಾಲಿನಲ್ಲಿ ಕರಾರು ಪತ್ರದ ಸಂಖ್ಯೆಯನ್ನು ಖಾಲಿ ಬಿಟ್ಟಿರುತ್ತೇವೆ ಎಂದರೆ ಅದು ಗಣಕೀಕೃತ ತಪ್ಪು ಆಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಕರಾರು ಪತ್ರವನ್ನು ಸೃಷ್ಠಿ ಮಾಡಿಕೊಂಡಿದ್ದರಿಂದ ನಿ ಪಿ 51 ರಲ್ಲಿ ಕರಾರು ಪತ್ರದ ಸಂಖ್ಯೆ ಖಾಲಿ ಬಿಟ್ಟಿರುತ್ತೇವೆಂದರೆ ಸರಿಯಲ್ಲ.

ರಾಜೇಂದ್ರ ರವರು 1 ನೇ ಪ್ರತಿವಾದಿಗೆ ಹಣ ನೀಡುವ ಸಮಯದಲ್ಲಿ ದಾಖಲಾತಿಗಳು ಬೇಕು ಎಂದು ಕೇಳಿದ್ದು, ದಾಖಲಾತಿಗಳನ್ನು ಮಾಡಿಕೊಡುವ ಸಮಯದಲ್ಲಿ ನಾನು ಮತ್ತು

ರಾಜೇಂದ್ರ ರವರು ಉಪನೋಂದಾಣಾಧಿಕಾರಿ ಕಚೇರಿಯಲ್ಲಿ ದಾವ ಆಸ್ತಿಗೆ ಸಂಬಂಧಪಟ್ಟಂತೆ ಸುಳ್ಳು ದಾಖಲಾತಿಗಳಿಗೆ ಯಾವುದೇ ಮಾಹಿತಿ ಇಲ್ಲದೇ ಪ್ರತಿವಾದಿಗಳ ಸಹಿ ಪಡೆದಿರುತ್ತೇವೆಂದರೆ ಸರಿಯಲ್ಲ. ಪ್ರತಿವಾದಿಯವರು ನನ್ನಿಂದ ಯಾವುದೇ ಮುಂಗಡ ಹಣ ಅಥವಾ ಕ್ರಯದ ಪ್ರತಿಫಲ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ರಾಜೇಂದ್ರ ರವರು 30 ಗುಂಟೆ ಜಮೀನು ಸಲುವಾಗಿ ದಾಖಲಾತಿಗಳನ್ನು ಮಾಡಿಕೊಳ್ಳುವ ಸಮಯದಲ್ಲಿ ನಾನು ಅವರ ಜೊತೆ ಶಾಮೀಲಾಗಿ ಉಳಿಕೆ 30 ಗುಂಟೆ ಜಮೀನಿಗೆ ದಾಖಲಾತಿಗಳನು ಸೃಷ್ಠಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲಾತಿ ಸೃಷ್ಠಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯವರು ಯಾವುದೇ ಕ್ರಯ ಪತ್ರ ಬರೆದುಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿ ಹೊರತು ಪಡಿಸಿ ಪ್ರತಿವಾದಿಯರಿಗೆ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**